**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ.100/2020**

**ಸಿ.ಡಬ್ಲ್ಯೂಃ1 ಪಿ.ಡಬ್ಲ್ಯೂಃ 1**

ಸಾಕ್ಷಿದಾರನ ಹೆಸರು : ಹಸನ್ ಸಾಬ್

ತಂದೆಯ ಹೆಸರು : ಹುಸೇನ್ ಸಾಬ್

ವಯಸ್ಸು : 59 ವರ್ಷ

ಕೆಲಸ : ಪಿಐ

ವಾಸ : ರಾಯಚೂರು

**ಸಾಕ್ಷಿಗೆ ದಿನಾಂಕಃ25.03.2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನಾನು ಫೆಬ್ರವರಿ 2018 ರಿಂದ ಫೆಬ್ರವರಿ 2020 ರವರೆಗೂ ಸಿಪಿಐ ಆಗಿ ತೆಕ್ಕಲಕೋಟೆಯ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ09.09.2019 ರಂದು ಸಿರಿಗೇರಿ ಮತ್ತು ತೆಕ್ಕಲಕೋಟೆ ಸರಹದ್ದಿನ ಠಾಣೆಗಳಲ್ಲಿ ಮೊಹರಂ ಹಬ್ಬದ ರಾತ್ರಿ ಗಸ್ತು ಕರ್ತವ್ಯಕ್ಕೆ ನಾನು ಸಿಬ್ಬಂದಿಯರೊಂದಿಗೆ ಪೆಟ್ರೋಲಿಂಗ್ ಕರ್ತವ್ಯ ಮಾಡುತ್ತಾ ರಾತ್ರಿ 1 ಗಂಟೆಗೆ ನಿಟ್ಟೂರು ಗ್ರಾಮಕ್ಕೆ ಹೋಗಿ ಅಲ್ಲಿ ಗಸ್ತು ಮಾಡುತ್ತಾ ನಂತರ 1.30 ಗಂಟೆಗೆ ಹರೆಕಲ್ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಬಂದಾಗ ಹನುಮೇಶ್ ನಾಯಕ್ ಮತ್ತು ಮತ್ತೊಬ್ಬ ವ್ಯಕ್ತಿಗಳು ಮೊಹರಂ ಹಬ್ಬದ ನಿಮಿತ್ತ ಮದ್ಯ ಮಾರಾಟ ನಿಷೇದ ಇದ್ದರು ಸಹ ಮದ್ಯ ವನ್ನು ಸಂಗ್ರಹ ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ನಮ್ಮ ಸಿಬ್ಬಂದಿ ಚಾಸಾ. 4 ರವರ ಮೂಲಕ ಇಬ್ಬರು ಪಂಚರನ್ನು ಬರಮಾಡಿಕೊಂಡು ಹಾರೆಕಲ್ಲು ಗ್ರಾಮದ ರಮೇಶ್ ಗೋಡೌನ್ ಹತ್ತಿರ ಬೆಳಗಿನ ಜಾವ 1.50 ಗಂಟೆಗೆ ಮರೆಮಾಡಿ ನಿಂತು ನೋಡಲಾಗಿ ಇಬ್ಬರು ವ್ಯಕ್ತಿಗಳು ಮದ್ಯ ಮಾರಾಟದಲ್ಲಿ ತೊಡಗಿರುವುದನ್ನು ನೋಡಿ ನಾನು ಮತ್ತು ಪಂಚರು ಮತ್ತು ಸಿಬ್ಬಂದಿಯವರೊಂದಿಗೆ ದಾಳಿ ಮಾಡಿ ಅವರ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಓಬಳೇಶ ತಂದೆ ಗೋಸಿ ರಾಮಯ್ಯ ಎಂದು ಇದ್ದುಆತನ ವಶದಲ್ಲಿ ರೂ.8880/- ಹಣ ಮದ್ಯ ಮಾರಾಟ ಮಾಡಿ ಬಂದ ಹಣ ಆಗಿದ್ದು ಇನ್ನೊಬ್ಬ ವ್ಯಕ್ತಿಯನ್ನು ವಿಚಾರಿಸಲಾಗಿ ತನ್ನ ಹೆಸರು ಹನುಮೇಶತಂದೆ ರಾಮಣ್ಣ ಎಂದು ಇದ್ದು ಸದರಿ ಮದ್ಯ ಮಾರಾಟ ಮಾಡಲು ಸರ್ಕಾರದಿಂದ ಪರವಾನಗಿ ಇದೆಯಾ ಎಂದು ವಿಚಾರಿಸಲಾಗಿ ಸದರಿಯವರು ಇಲ್ಲ ಎಂದು ತಿಳಿಸಿರುತ್ತಾರೆ. ಅವರ ಹತ್ತಿರ ಇದ್ದ ಮದ್ಯವನ್ನು ಸಿರುಗುಪ್ಪ ಪಟ್ಟಣದ ಲಡಖಾನ್ ಮಸೀದಿ ಹತ್ತಿರದ ವೈನ್ ಶಾಪ

ಮಾಲೀಕನಿಂದ ಖರೀದಿ ಮಾಡಿಕೊಂಡು ಬಂದು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಅವರ ಬಳಿ ಇದ್ದ ಮದ್ಯವನ್ನು ಪರಿಶೀಲಿಸಿದಾಗ ಅವರ ಬಳಿ ಒಟ್ಟು 948 ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಇದ್ದು ಅವುಗಳ ಒಟ್ಟು ಬೆಲೆ 40169/- ಆಗುತ್ತಿತ್ತು. ಸದರಿ ಮದ್ಯವನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಬೆಳಿಗ್ಗೆ 1.50 ರಿಂದ 2.50 ಗಂಟೆ ವರೆಗೆ ಜಪ್ತುಪಡಿಸಿಕೊಂಡಿರುತ್ತೇವೆ. ಪಂಚನಾಮೆ ಬರೆದು ತಲಾ ಒಂದರಂತೆ ಟೆಟ್ರಾ ಪ್ಯಾಕೆಟ್ ನ್ನು ಸ್ಯಾಂಪಲ್ ಗಾಗಿ ತೆಗೆದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಬಾಯಿಕಟ್ಟಿ ಅರಗಿನಿಂದ ಸೀಲ್ ಮಾಡಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಜಪ್ತುಪಡಿಸಿಕೊಂಡ ಮದ್ಯ ಮತ್ತು ಆರೋಪಿತರೊಂದಿಗೆ ತೆಕ್ಕಲಕೊಟೆ ಠಾಣೆಗೆ ಬಂದು ಗಣಕ ಯಂತ್ರದಲ್ಲಿದೂರನ್ನು ತಯಾರಿಸಿ ಪೊಲೀಸ್ ಠಾಣೆಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೊಪಿತರನ್ನು ನೋಡಿ ಗುರುತಿಸಿರುತ್ತಾರೆ .

3. ಸಾಕ್ಷಿಯು ನ್ಯಾಯಾಲಯದ ಮುಂದಿರುವ 90 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 1 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 1(ಎ)ಎಂದು ,90 ಎಂಎಲ್ ನ ಒರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 2 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 2(ಎ)ಎಂದು , 90 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 3 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 3(ಎ)ಎಂದು , 180 ಎಂಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 4 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 4(ಎ)ಎಂದು , 90 ಎಂಎಲ್ ನ ಒಲ್ಡ ಟವರಿನ್ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 5 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 5(ಎ)ಎಂದು ,90 ಎಂಎಲ್ ನ ಒಲ್ಡ ಟವರಿನ್ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 6 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 6(ಎ)ಎಂದು ,90 ಎಂಎಲ್ ನ ಒಲ್ಡ ಟವರಿನ್ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 7 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 7(ಎ)ಎಂದು , 180 ಎಂಎಲ್ ನ 8 ಪಿ ಎಂ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 8 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 8(ಎ)ಎಂದು ,90 ಎಂಎಲ್ ನ 8 ಪಿ ಎಂ

ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 9 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 9(ಎ)ಎಂದು ,90 ಎಂಎಲ್ ನ 8 ಪಿ ಎಂ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 10 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 10(ಎ)ಎಂದು , 90 ಎಂಎಲ್ ನ ಹೈವಾರ್ಡ್ಸ್ ವಿಸ್ಕಿಯ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 11 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 11(ಎ)ಎಂದು , 90 ಎಂಎಲ್ ನ ಮ್ಯಾಕ್ ಡೋವೆಲ್ ತ್ರಿಬಲ್ ಎಕ್ಸ ರಮ್ 1 ಖಾಲಿ ಟೆಟ್ರಾ ಪ್ಯಾಕೆಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 12 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆಮಾಲು 12(ಎ)ಎಂದು , ಪಂಚನಾಮೆಯನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು, ದೂರು / ಪ್ರಥಮ ವರದಿಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 (ಎ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3 (ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರವಾಗಿ : ಶ್ರೀ ಬಿ ಯು: ವಕೀಲರಿಂದ:</u>**

4. ಪಂಚನಾಮೆಯನ್ನು ಚಾಸ-.4 ರವರು ಬರೆದಿರುತ್ತಾರೆ. ಮುದ್ದೆಮಾಲುಗಳ ಮೇಲೆ ಜಪ್ತುಪಡಿಸಿದ ಸಮಯ ಹಾಕಿಲ್ಲ ಎಂದರೆ ಸರಿ . ಜಪುಪಡಿಸಿದ ನಗದು ಹಣ ಯಾವ ಮುಖ ಬೆಲೆಯ ನೋಟುಗಳನ್ನು ಹೊಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ.12 ರವರಿಗೆ ನಾನು ಮೇಲಾಧಿಕಾರಿ ಇದ್ದೆ ಎಂದರೆ ನಿಜ. ಆರೋಪಿತರು ಯಾವುದೇ ಅಪರಾಧ ಮಾಡದಿದ್ದರು ಸಹ ಅವರ ವಿರುದ್ದಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಮುದ್ದೆಮಾಲನ್ನು ವಶಪಡಿಸಿಕೊಳ್ಳಲಾಗಿಲ್ಲ ಎಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**